# ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ, ಕನಕಪುರ

## ಸಿಸಿ ನಂ.447/2013

| | | | |
|---|---|---|---|
| ಚಾಸಾ | **5** | ಪ್ರಾಸಾ | **7** |
| ಹೆಸರು | | ಮರಿಗೌಡ | |
| ತಂದೆಯ ಹೆಸರು / ಗಂಡನ ಹೆಸರು | | ಲೇಟ್ ಮರಿಯಪ್ಪ | |
| ವಯಸ್ಸು | | **67** ವರ್ಷಗಳು | |
| ಉದ್ಯೋಗ | | ನಿವೃತ್ತ ಎಎಸ್ಐ | |
| ವಿಳಾಸ | | ನಾಗಮಂಗಲ ಗ್ರಾಮ | |

ದಿನಾಂಕ**.01.08.2025**ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**.**

**ಮುಖ್ಯವಿಚಾರಣೆ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ-**

ನಾನು **2006** ರಿಂದ **2013**ರ ವರೆಗೆ ಹಾರೋಹಳ್ಳಿ ಪೊಲೀಸ್ ಠಾಣೆಯಲ್ಲಿ ಹೆಡ್ ಕಾನ್ಸ್ಟೇಬಲ್ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ**.**

ನನಗೆ ನ್ಯಾಯಾಲಯದ ಮುಂದಿರುವ ಆರೋಪಿತರು ಗೊತ್ತು. ಚಾಸಾ**-1** ರಿಂದ ಚಾಸಾ**-4,** ಚಾಸಾ**-6** ರಿಂದ ಚಾಸಾ**-9** ರವರು ನನಗೆ ಗೊತ್ತು.

ದಿನಾಂಕ.**04.05.2012**ರಂದು ಸಂಜೆ **5.00** ರಿಂದ **5.30** ಗಂಟೆ ಸುಮಾರಿಗೆ ನಾನು ಠಾಣೆಯಲ್ಲಿರುವಾಗ ಮರಳವಾಡಿಯಿಂದ ಚಾಸಾ-**2** ಮತ್ತು ಚಾಸಾ-**3** ರವರು ಚಾಸಾ-**4** ರವರಿಗೆ ಕರೆ ಮಾಡಿ ಚಾಸಾ-**1** ರವರನ್ನು ಆರೋಪಿತರು ತಮ್ಮ ಮನೆಯ ಬಳಿ ಕಟ್ಟಿ ಹಾಕಿರುತ್ತಾರೆಂಬ ಸಂಗತಿಯನ್ನು ತಿಳಿಸಿರುತ್ತಾರೆ. ಆಗ ಚಾಸಾ-**4** ರವರು ವಿಷಯವನ್ನು ನಮಗೆ ತಿಳಿಸಿ ನನ್ನನ್ನು, ಚಾಸಾ-**6** ಮತ್ತು ಚಾಸಾ-**7** ರವರನ್ನು ಕರೆದುಕೊಂಡು ಮುರುಳಿದೊಡ್ಡಿ ಗ್ರಾಮಕ್ಕೆ ಹೋದರು. ಅಲ್ಲಿ ಹೋಗಿ ನೋಡಲಾಗಿ ಆರೋಪಿತರ ಮನೆಯ ಮುಂಭಾಗದಲ್ಲಿ ಒಂದು ಮರವಿದ್ದು, ಆ ಮರಕ್ಕೆ ಚಾಸಾ-**1** ರವರನ್ನು ಕಟ್ಟಿ ಹಾಕಿರುವುದು ನಮಗೆ ಕಂಡುಬಂದಿರುತ್ತದೆ. ಆಗ ಚಾಸಾ-**1** ರವರನ್ನು ವಿಚಾರಿಸಲಾಗಿ ಅವರು ಒಂದು ಪ್ರಕರಣಕ್ಕೆ ಸಂಬಂಧಿಸಿದಂತೆ **1**ನೇ ಆರೋಪಿಯನ್ನು ದಸ್ತಗಿರಿ ಮಾಡಲು ಬಂದಾಗ **1**ನೇ ಆರೋಪಿ ಮತ್ತು ಅವರ ಮನೆಯವರು ಸೇರಿಕೊಂಡು ತಮಗೆ ಕಟ್ಟಿ ಹಾಕಿರುವ ವಿಚಾರ ನಮಗೆ ತಿಳಿಸಿದರು. ಆಗ ನಾವು ಚಾಸಾ-**2** ಮತ್ತು ಚಾಸಾ-**3** ರವರ ಸಹಾಯ ತೆಗೆದುಕೊಂಡು ಚಾಸಾ-**1** ರವರನ್ನು ಮರದಿಂದ ಬಿಡಿಸಿದೆವು.

ಆಗ **1**ನೇ ಆರೋಪಿಯ ಹೆಂಡತಿಯಾದ ಶಾಂತಮ್ಮ ರವರು ತಾವು ಗೆದ್ದಲುಪುಡಿಯನ್ನು ಕುಡಿದುಬಿಟ್ಟಿದ್ದೇನೆ ಎಂದು ಗಲಾಟೆ ಮಾಡಲು ಪ್ರಾರಂಭಿಸಿದರು. **1**ನೇ ಆರೋಪಿಯನ್ನು ಅದು ಹೇಗೆ ಕರೆದುಕೊಂಡು ಹೋಗುತ್ತಿರೋ ಹೋಗಿ ನೋಡುತ್ತೇವೆ ಎಂದು ಉಳಿದ ಆರೋಪಿತರು ನಮ್ಮ ಮೇಲೆ ಜೋರಾಗಿ ಕೂಗಾಡಿ ನಮ್ಮ ಕೆಲಸಕ್ಕೆ ಅಡ್ಡಿಪಡಿಸಿದರು. ನಂತರ ನಾವು ಚಾಸಾ-**2** ಮತ್ತು ಚಾಸಾ-**3** ರವರ ಸಹಾಯದಿಂದ ಚಾಸಾ-

1 ರವರನ್ನು ಬಿಡಿಸಿಕೊಂಡು ಠಾಣೆಗೆ ಕರೆದುಕೊಂಡು ಬಂದೆವು. ಈ ಮೇಲಿನ ವಿಚಾರಕ್ಕೆ ಸಂಬಂಧಿಸಿದಂತೆ ನಾನು ಹೇಳಿಕೆಯನ್ನು ಸಹ ನೀಡಿರುತ್ತೇನೆ.

ಸಾಕ್ಷಿಯು ನ್ಯಾಯಾಲಯದ ಮುಂದಿರುವ ಒಂದು ಹಿಟ್ಟಿನದೊಣ್ಣೆ, ಒಂದು ಪಾಸ್ಟಿಕ್ ಹಗ್ಗ ಮತ್ತು ಸ್ವಲ್ಪ ಸೀಮೆಎಣ್ಣೆ ಇರುವ ಪಾಸ್ಟಿಕ್ ಬಾಟಲಿಯನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ಗುರುತಿಸಿದ ಒಂದು ಹಿಟ್ಟಿನದೊಣ್ಣೆ, ಒಂದು ಪಾಸ್ಟಿಕ್ ಹಗ್ಗ ಮತ್ತು ಸ್ವಲ್ಪ ಸೀಮೆಎಣ್ಣೆ ಇರುವ ಪಾಸ್ಟಿಕ್ ಬಾಟಲಿಯನ್ನು ಈಗಾಗಲೇ ಮುದ್ದೆಮಾಲು 1 ರಿಂದ 3 ಎಂದು ಗುರುತಿಸಲಾಗಿರುತ್ತದೆ.

<u>ಪಾಟೀ ಸವಾಲುಃ- ಆರೋಪಿತರ ಪರ ವಕೀಲರಾದ ಶ್ರೀ ಕೆಬಿಕೆ ರವರಿಂದಃ-</u>

ಮುದ್ದೆಮಾಲು 1 ಮತ್ತು 3 ರಂತೆ ಇರುವ ಒಂದು ಹಿಟ್ಟಿನದೊಣ್ಣೆ, ಒಂದು ಪಾಸ್ಟಿಕ್ ಹಗ್ಗ ಎಲ್ಲ ಕಡೆ ಬಿದ್ದಿರುತ್ತವೆ ಎಂದರೆ ಸರಿಯಲ್ಲ. ಮುದ್ದೆಮಾಲು 1 ರಿಂದ 3ನ್ನು ಸ್ಥಳದಲ್ಲಿ ಅಮಾನತ್ತುಪಡಿಸಿಕೊಂಡಿದ್ದೇವೆ ಎಂಬ ಬಗ್ಗೆ ಅವುಗಳ ಮೇಲೆ ಸಾಕ್ಷಿದಾರರ ಸಹಿ ಇರುವ ಯಾವುದೇ ಚೀಟಿಗಳು ಲಭ್ಯವಿಲ್ಲ ಎಂದರೆ ಸರಿ. ಪೊಲೀಸ್ ಠಾಣೆಯಿಂದ ಮುರುಳಿದೊಡ್ಡಿ ಗ್ರಾಮಕ್ಕೆ 8 ಕಿ.ಮಿ ಅಂತರವಿದೆ. ನಾವುಗಳು ಆ ದಿನ ನಮ್ಮ ಸ್ವಂತ ದ್ವಿಚಕ್ರ ವಾಹನಗಳಲ್ಲಿ ಹೋಗಿರುತ್ತೇವೆ. ಗಾಡಿಗಳ ನಂಬರ್ ಮತ್ತು ಬಣ್ಣವನ್ನು ಈಗ ಹೇಳಲು ನನಗೆ ಆಗುವುದಿಲ್ಲ. ಆ ದಿನ ಚಾಸಾ-1 ರವರು ಸಿವಿಲ್ ಡ್ರಸ್ಸಿ ನಲ್ಲಿದ್ದರು ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ. ಚಾಸಾ-1 ರವರು ಆ ದಿನ ಒಂದು ಕ್ರಿಮಿನಲ್ ಪ್ರಕರಣಕ್ಕೆ ಸಂಬಂಧಿಸಿದಂತೆ 1ನೇ ಆರೋಪಿಯನ್ನು ಕರೆದುಕೊಂಡು ಬರಲು

ಮುರುಳಿದೊಡ್ಡಿ ಗ್ರಾಮಕ್ಕೆ ಹೋಗಿದ್ದರು. ಚಾಸಾ-1 ರವರಿಗೆ 1ನೇ ಆರೋಪಿಯನ್ನು ಕರೆದುಕೊಂಡು ಬರಲು ನೋಟಿಸ್ಸಿ ಕೊಟ್ಟಿದ್ದರೋ ಇಲ್ಲವೋ ನನಗೆ ಗೊತ್ತಿಲ್ಲ.

ಚಾಸಾ-1 ರವರು ಪೊಲೀಸ್ ಕಾನ್ಸ್ಟೇಬಲ್ ಆಗಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ಯಾವುದೇ ಒಬ್ಬ ಆರೋಪಿಯನ್ನು ದಸ್ತಗಿರಿ ಮಾಡಬೇಕಾದರೆ ಎಎಸ್ಐ ಹುದ್ದೆಗಿಂತ ಕಡಿಮೆಇರುವ ಪೊಲೀಸ್ ಅಧಿಕಾರಿ ದಸ್ತಗಿರಿ ಮಾಡಲು ಬರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಚಾಸಾ-1 ರವರು ಆ ದಿನ 1ನೇ ಆರೋಪಿಯ ಮನೆಗೆ ಹೋದಾಗ ಏನೆಲ್ಲಾ ಮಾಡಿದರು ಏನೆಲ್ಲ ನಡೆದಿತ್ತು ಎಂದು ನನಗೆ ಗೊತ್ತಿಲ್ಲ. ಆ ದಿನ ಚಾಸಾ-1 ರವರನ್ನು ಯಾವ ಮರಕ್ಕೆ ಕಟ್ಟಿ ಹಾಕಿದ್ದರು ಎಂಬ ಬಗ್ಗೆ ನನಗೆ ಮರದ ಹೆಸರು ಹೇಳಲು ಬರುವುದಿಲ್ಲ ಎಂದರೆ ಸಾಕ್ಷಿಯು ಬಹಳ ದಿನಗಳಾದ ಕಾರಣಕ್ಕೆ ಮರದ ಹೆಸರು ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ಆರೋಪಿತರ ಮನೆಯ ಬಾಗಿಲು ಉತ್ತರಕ್ಕೆ ಇದೆ, ಬಾಗಿಲಿನ ಮುಂದೆ ಮರ ಇದೆ, ಖಾಲಿ ಜಾಗ ಇದೆ ಮತ್ತು ರಸ್ತೆ ಇದೆ. ಆರೋಪಿತರ ಮನೆಯ ಅಕ್ಕಪಕ್ಕ ಯಾರ ಯಾರ ಮನೆಗಳು ಇವೆ ಎಂದು ನನಗೆ ಹೇಳಲು ಬರುವುದಿಲ್ಲ. ನಾವುಗಳು ಸ್ಥಳಕ್ಕೆ ಹೋದಾಗ ಊರಿನ ಜನರು ಸ್ಥಳದಲ್ಲಿ ಹಾಜರಿದ್ದರು. ಸಾಕ್ಷಿಯು ಮುಂದುವರೆದು ಅವರು ಸಹ ನಿಂತು ನೋಡುತ್ತಿದ್ದರು ಎಂದು ನುಡಿಯುತ್ತಾರೆ. ಆ ದಿನ ಸ್ಥಳದಲ್ಲಿ ಹಾಜರಿದ್ದ ಗ್ರಾಮಸ್ಥರ ಹೆಸರುಗಳು ನನಗೆ ಗೊತ್ತಿಲ್ಲ. ಅವರುಗಳನ್ನು ಈ ಪ್ರಕರಣದಲ್ಲಿ ಸಾಕ್ಷಿದಾರರನ್ನಾಗಿ ಮಾಡಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ.

ಆ ದಿನ ಚಾಸಾ-1 ರವರು 1ನೇ ಆರೋಪಿಯ ಮನೆಯ ಒಳಗೆ ನುಗ್ಗಿ 1ನೇ ಆರೋಪಿಯನ್ನು ಮತ್ತು ಆತನ ಹೆಂಡತಿಯನ್ನು ಆಕೆ ತೊಟ್ಟಿದ್ದ ನೈಟಿಯನ್ನು ಹಿಡಿದು ದರದರನೆ ಮನೆಯಿಂದ ಹೊರಗೆ ಎಳೆದುಕೊಂಡು ಬಂದಿರುತ್ತಾರೆ ಎಂದರೆ ಸರಿಯಲ್ಲ. 1ನೇ ಆರೋಪಿಯ ಹೆಂಡತಿ ನೈಟಿಯನ್ನು ಚಾಸಾ-1 ರವರು ಹರಿದು ಹಾಕಿದ ಕಾರಣಕ್ಕೆ ಆತನ ಹೆಂಡತಿ ಜೋರಾಗಿ ಕಿರುಚಿಕೊಂಡಾಗ ಜನರು ಸೇರಿದ್ದರು ಎಂದರೆ ಸರಿಯಲ್ಲ. 1ನೇ ಆರೋಪಿಗೆ ಆ ಪ್ರಕರಣದಲ್ಲಿ ನಿರೀಕ್ಷಣಾ ಜಾಮೀನು ಮೂರು ದಿನಗಳ ಹಿಂದೆಯೇ ಸಿಕ್ಕಿತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ನಿರೀಕ್ಷಣಾ ಜಾಮೀನಿನ ಪ್ರತಿಯನ್ನು ತೋರಿಸಿದ್ದಾಗ್ಯೂ ಸಹ ಚಾಸಾ-1 ರವರು 1ನೇ ಆರೋಪಿಯ ಮನೆಯಲ್ಲಿ ದಾಂದಲೆ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ಚಾಸಾ-2 ರವರ ವಾಸದ ಊರು ಗೋದೂರು ಎಂದರೆ ಸರಿ. ಚಾಸಾ-2 ರವರು ಆ ದಿನ ಮುರುಳಿದೊಡ್ಡಿ ಗ್ರಾಮಕ್ಕೆ ಏತಕ್ಕಾಗಿ ಬಂದಿದ್ದರು ಎಂಬ ಬಗ್ಗೆ ನಿಮಗೆ ಗೊತ್ತಿಲ್ಲ ಎಂದರೆ ಸಾಕ್ಷಿಯು ಆ ದಿನ ಚಾಸಾ-2 ರವರು ಚಾಸಾ-3 ರವರೊಂದಿಗೆ ಆದೇ ಊರಿನಲ್ಲಿ ಇದ್ದರು ಎಂದು ನುಡಿಯುತ್ತಾರೆ. ಆ ದಿನ ಚಾಸಾ-1 ರವರು ಚಾಸಾ-2 ಹಾಗೂ ಚಾಸಾ-3 ಮತ್ತು ಇತರೆ ಮೂರು-ನಾಲ್ಕು ಜನ ಗುಂಡಾಗಳೊಂದಿಗೆ ಮುರುಳಿದೊಡ್ಡಿ ಗ್ರಾಮಕ್ಕೆ ಕಾರು ಮಾಡಿಕೊಂಡು ಹೋಗಿದ್ದರು ಎಂದರೆ ಸರಿಯಲ್ಲ. ಈ ಘಟನೆಯದಾಗ ಚಾಸಾ-1 ರಿಂದ ಚಾಸಾ-3 ರವರು ಘಟನಾ ಸ್ಥಳದಲ್ಲಿ ಹಾಜರಿದ್ದರು ಎಂದರೆ ಸರಿ.

ಚಾಸಾ-**1** ರವರು **1**ನೇ ಆರೋಪಿಯ ಕೊರಳಪಟ್ಟಿಯನ್ನು ಹಿಡಿದು ಮನೆಯಿಂದ ದರದರನೆ ಎಳೆದುಕೊಂಡು ಬರುವಾಗ ಆತನ ಹೆಂಡತಿ ವಿಷ ಕುಡಿದರು ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು ನಾನು ಆಗ ಇರಲಿಲ್ಲ ಎಂದು ನುಡಿಯುತ್ತಾರೆ. ಚಾಸಾ-**4** ಮತ್ತು ನಮ್ಮ ಠಾಣೆಯ ಉಳಿದ ಸಿಬ್ಬಂದಿಗಳು ಸ್ಥಳಕ್ಕೆ ಆಂಬ್ಯೂಲೆನ್ಸ್ ಕರೆಯಿಸಿ **1**ನೇ ಆರೋಪಿಯ ಹೆಂಡತಿಯನ್ನು ಆಸ್ಪತ್ರೆಗೆ ಕರೆದುಕೊಂಡು ಹೋದರು ಎಂದರೆ ಸರಿಯಲ್ಲ. **1**ನೇ ಆರೋಪಿಯನ್ನು ಹಿಡಿದುಕೊಂಡಾಗ ಆತನನ್ನು ಬಿಡಿಸಲು **2** ರಿಂದ **5**ನೇ ಆರೋಪಿತರು ಅಲ್ಲಿಗೆ ಬಂದರು ಎಂದರೆ ನನಗೆ ಗೊತ್ತಿಲ್ಲ. ನಾವು ಸ್ಥಳಕ್ಕೆ ಹೋದಾಗ ಯಾವುದೇ ಗಲಾಟೆ ನಡೆಯುತ್ತಿರಲಿಲ್ಲ ಎಂದರೆ ಸರಿಯಲ್ಲ. ನಾವುಗಳು ಆ ದಿನ ಘಟನಾ ಸ್ಥಳಕ್ಕೆ ಹೋಗಿಯೇ ಇಲ್ಲ ಎಂದರೆ ಸರಿಯಲ್ಲ. ಸ್ಥಳದಲ್ಲಿ ನಾನು ಮುದ್ದೆಮಾಲು-**1** ರಿಂದ **3**ನ್ನು ನೋಡಿಲ್ಲ ಎಂದರೆ ಸರಿಯಲ್ಲ.

ಆ ದಿನ ಮುರುಳುದೊಡ್ಡಿ ಗ್ರಾಮದಿಂದ ನಾವುಗಳು ಎಷ್ಟು ಗಂಟೆಗೆ ಪೊಲೀಸ್ ಠಾಣೆಗೆ ಬಂದೆವು ಎಂದು ನನಗೆ ಈಗ ನೆನಪಿಲ್ಲ. ಚಾಸಾ-**1** ರವರು ಅದೇ ದಿನ ದೂರು ನೀಡಿರುತ್ತಾರೆ, ದೂರು ನೀಡಿದ ಸಮಯ ನನಗೆ ನೆನಪಿಲ್ಲ. ಚಾಸಾ-**1** ರವರು ದೂರು ಕೊಟ್ಟಾಗ ನಾನು ಠಾಣೆಯಲ್ಲಿ ಇರಲಿಲ್ಲ. **5**ನೇ ಆರೋಪಿ ವಿಷ ಕುಡಿದ ಕಾರಣಕ್ಕೆ ಆಸ್ಪತ್ರೆಯಿಂದ ಆಕೆಯ ಸ್ಥಿತಿ ಸಿರಿಯಸ್ ಇದೆ ಎಂದು ನಮಗೆ ಮಾಹಿತಿ ಬಂದ ತಕ್ಷಣವೇ ನಾವುಗಳು ಸುಳ್ಳು ದೂರನ್ನು ಸೃಷ್ಟಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಆ ದಿನ **1**ನೇ ಆರೋಪಿಯನ್ನು ದಸ್ತಗಿರಿ ಮಾಡಲು ಚಾಸಾ-**1** ರವರಿಗೆ ಯಾವುದೇ ಆದೇಶ ಇರಲಿಲ್ಲ, ಆದ್ದಾಗ್ಯೂ ಚಾಸಾ-**1** ರವರು **1**ನೇ ಆರೋಪಿಯ ಮನೆಗೆ ಹೋಗಿ ಇದೆಲ್ಲ ರಂಪಾಟ

ಮಾಡಿದ್ದರಿಂದ ತಪ್ಪಿ ಸಿಕೊಳ್ಳಲು ಸುಳ್ಳು ದೂರನ್ನು ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ. ಆ ದಿನ ಸ್ಥಳಕ್ಕೆ ಹೋಗುವಾಗ ನಾವುಗಳು ಎಲ್ಲರು ಯಾವ ಬಣ್ಣದ ಬಟ್ಟೆ ಧರಿಸಿದ್ದರು ಮತ್ತು ಚಾಸಾ-1 ರವರು ಯಾವ ಬಟ್ಟೆ ಧರಿಸಿದ್ದರು ಎಂದು ನನಗೆ ಈಗ ನೆನಪಿಲ್ಲ. ಆರೋಪಿತರ ಮನೆಯ ಮುಂದೆ ನಾನು ಹೇಳಿದಂತೆ ಯಾವುದೇ ಮರ ಇಲ್ಲ ಎಂದರೆ ಸರಿಯಲ್ಲ. ಆರೋಪಿತರು ಸಹ ಚಾಸಾ-1 ರವರನ್ನು ಯಾವುದೇ ಮರಕ್ಕೆ ಕಟ್ಟಿ ಹಾಕಿರಲಿಲ್ಲ ಎಂದರೆ ಸರಿಯಲ್ಲ. ಚಾಸಾ-1 ರವರು ನಮ್ಮ ಇಲಾಖಾ ಸಿಬ್ಬಂದಿಯಾದ ಕಾರಣಕ್ಕೆ ಅವರಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆ:- ಇಲ್ಲ</u>

(ಸಾಕ್ಷಿಯ ವಿಚಾರಣೆಯನ್ನು ನಾನು ತೆರೆದ ನ್ಯಾಯಾಲಯದಲ್ಲಿ ಪಡೆದುಕೊಂಡಿರುತ್ತೇನೆ ಎಂದು ದೃಢೀಕರಿಸುತ್ತೇನೆ.)

**ಓ ಹೇ ಕೇ ಸರಿ ಇದೆ,**

**(ರಾಧ.ಎಸ್)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಕನಕಪುರ.**